1) ಪೊಲೀಸ್ ಇಲಾಖೆಯಲ್ಲಿ ರಾಜ್ಯದಾದ್ಯಂತ ಎಷ್ಟು ಮಂದಿ ಪೊಲೀಸ್ ಕಾನ್ಸ್‌ಟೇಬಲ್: ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಮತ್ತು ಎ.ಎಸ್.ಐ.ಗಳಿದ್ದಾರೆ ? ಅವರುಗಳಲ್ಲಿ ಎಷ್ಟು ಜನರಿಗೆ ಬಡ್ತಿ ದೊರೆತಿದೆ ?

2) ಬಡ್ತಿ ಸಿಗದೇ ಇದ್ದವರ ಸಂಖ್ಯೆ ಎಷ್ಟು ಹಾಗೂ ಅವರಿಗೆಲ್ಲ ಯಾವಾಗ ಬಡ್ತಿ ದೊರಕುವುದು ?

3) ಅಂತಹ ವಿಳಂಬಕ್ಕೆ ಕಾರಣವೇನು ?

4) ಅವರಲ್ಲಿ ಎಸ್.ಸಿ :ಎಸ್.ಟಿ ಹಾಗೂ ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ ಜನರೆಷ್ಟು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಪೊಲೀಸ್ ಕಾನ್ಸ್‌ಟೇಬಲ್:ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಮತ್ತು ಎ.ಎಸ್.ಐ. ಸಿಬ್ಬಂದಿ ಬಲದ ಸಂಖ್ಯೆ ಈ ಕೆಳಕಂಡಂತಿದೆ.

| | |
|---|---|
| ಪೊಲೀಸ್ ಕಾನ್ಸ್‌ಟೇಬಲ್ | 33,749–00 |
| ಪೊಲೀಸ್ ಹೆಡ್ ಕಾನ್ಸ್‌ಟೇಬಲ್ | 10,600–00 |
| ಎ.ಎಸ್.ಐ.ಗಳು | 2,069–00 |

ಎಲ್ಲಾ 10,600 ಮುಖ್ಯ ಪೇದೆ ಮತ್ತು 2,069 ಎ.ಎಸ್.ಐ. ಹುದ್ದೆಗಳನ್ನು ಕ್ರಮವಾಗಿ ಪೊಲೀಸ್ ಪೇದೆ ಮತ್ತು ಪೊಲೀಸ್ ಮುಖ್ಯ ಪೇದೆ ವೃಂದದಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗನುಸಾರವಾಗಿ ಬಡ್ತಿ ನೀಡಿ ತುಂಬಲಾಗಿದೆ.

2) ಪೊಲೀಸ್ ಪೇದೆ ಹುದ್ದೆಯಲ್ಲಿ 33,749 ಇದ್ದು ಪೊಲೀಸ್ ಮುಖ್ಯ ಪೇದೆ ಮತ್ತು ಎ.ಎಸ್.ಐ. ವೃಂದದಲ್ಲಿ ಖಾಲಿ ಹುದ್ದೆಗಳು ಲಭ್ಯವಾದಂತೆ ಬಡ್ತಿಗೆ ಅರ್ಹರಾದವರಿಗೆ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ಬಡ್ತಿ ನೀಡಲಾಗುತ್ತಿದೆ. ಇವರಿಗೆ ದೊರಕುವ ಬಡ್ತಿಯ ಬಗ್ಗೆ ಖಚಿತವಾದ ಅವಧಿಯನ್ನು ನಿರ್ಧರಿಸಲಾಗದಿದ್ದರೂ ಒಂದು ಅಂದಾಜು ಸಮಯವನ್ನು ಕೆಳಗೆ ನಮೂದಿಸಲಾಗಿದೆ.

1) ಪೊಲೀಸ್ ಪೇದೆಯಿಂದ ಪೊಲೀಸ್ ಮುಖ್ಯ ಪೇದೆ 10 ರಿಂದ 15 ವರ್ಷಗಳು

2) ಮುಖ್ಯ ಪೇದೆಯಿಂದ ಎ.ಎಸ್.ಐ.ರವರೆಗೆ 10 ರಿಂದ 12 ವರ್ಷಗಳು

3) ಎ.ಎಸ್.ಐ. ನಿಂದ ಪಿ.ಎಸ್.ಐ. ರವರಗೆ 5 ರಿಂದ 8 ವರ್ಷಗಳು.

3) ಖಾಲಿ ಹುದ್ದೆಗಳ ಕೊರತೆಯಿಂದ ವಿಳಂಬವಾಗುವುದು.

4)

| | ಎಸ್.ಸಿ. | ಎಸ್.ಟಿ. | ಅಲ್ಪಸಂಖ್ಯಾತ |
|---|---|---|---|
| ಪಿ.ಸಿ. | 4,841 | 952 | 1,931 |
| ಹೆಚ್.ಸಿ. | 1,588 | 397 | 1,114 |
| ಎ.ಎಸ್.ಐ. | 311 | 82 | 292 |

## ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಕೆರೆಗಳು

**105 (586)** ಶ್ರೀ ನಾರಾಯಣಸ್ವಾಮಿ ಎಂ. (ಬೇತಮಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಗಾರಪೇಟೆ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ಸಣ್ಣ ನೀರಾವರಿ ಇಲಾಖೆಗೆ ಸೇರುತ್ತವೆ;

ಆ) ಈ ಕೆರೆಗಳಿಂದ ಸಾಗುವಳಿ ಮಾಡುತ್ತಿರುವ ಭೂಮಿ ಎಷ್ಟು (ಎಕರೆಗಳಲ್ಲಿ ವಿವರ ನೀಡುವುದು);

ಇ) ಈ ಕೆರೆಗಳಲ್ಲಿ ರಿಪೇರಿ, ಕಾಲುವೆ ದುರಸ್ತಿ ಇತ್ಯಾದಿ ಕೆಲಸಗಳಿಗೆ ಐದು ವರ್ಷಗಳಿಂದ ಬಿಡುಗಡೆ ಮಾಡಿರುವ ಹಣವೆಷ್ಟು;

ಈ) ಮಾಡದಿದ್ದಲ್ಲಿ, ಅದಕ್ಕೆ ಕಾರಣವೇನು ? ಹಾಗೂ ಯಾವಾಗ ಮಾಡಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ನಾಲ್ಕು

ಆ)

| ಕೆರೆಗಳ ಹೆಸರು | ಅಚ್ಚುಕಟ್ಟು –ಎಕರೆಗಳಲ್ಲಿ |
|---|---|
| 1. ಕಾಮಸಮುದ್ರ ಕೆರೆ | 655 |
| 2. ಮಾರ್ಕಂಡೇಯ ಕೆರೆ | 848 |
| 3. ಮುಷ್ಟ್ರಹಳ್ಳಿ ಕೆರೆ | 1114 |
| 4. ರಾಮಸಾಗರ ಕೆರೆ | 1203 |
| ಒಟ್ಟು: | 3820 |

ಇ)

| ವರ್ಷ | ಬಿಡುಗಡೆ ಮಾಡಿರುವ ಹಣ (ಲಕ್ಷ ರೂ.ಗಳಲ್ಲಿ) |
|---|---|
| 1988–89 | 1.75 |
| 1989–90 | 4.26 |
| 1990–91 | 4.30 |
| 1991–92 | 3.90 |
| 1992–93 | 6.35 |
| ಒಟ್ಟು: | 20.56 |

ಈ) ಉದ್ಭವಿಸುವುದಿಲ್ಲ.

## ರಾಜ್ಯದಲ್ಲಿರುವ ಖಾಲಿ ಇರುವ ಮಹಿಳಾ ವೈದ್ಯಾಧಿಕಾರಿಗಳ ಸಂಖ್ಯೆ

**106(607)** ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗ ಪಟ್ಟಣ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ರಾಜ್ಯದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು;

2) ರಾಜ್ಯದಲ್ಲಿ ಖಾಲಿ ಇರುವ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳೆಷ್ಟು;

3) ಸರ್ಕಾರವು ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

1) ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೆ ವೈದ್ಯಾಧಿಕಾರಿಗಳನ್ನು